tional and tourist centre? How much time you are going to take to complete this Stadium?

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೇ, ಶ್ರೀಮತಿಯವರು, ಮೈಸೂರಿನವರು ಕನ್ನಡದಲ್ಲಿ ಮಾತನಾಡಲಿ ...

ಅಭ್ಯಕ್ಷರು.—ನೀವು ಕುಳಿತುಕೊಳ್ಳಿ, ಅವರಿಗೆ ಕನ್ನಡ ಸರಿಯಾಗಿ ಬರುವುದಿಲ್ಲ.

(ಗೊಂದಲ)

ಡಾ॥ ಜೀವರಾಜ ಆಳ್ವ.—ಅದಕ್ಕೆ ನಾವು ಒಪ್ಪಿದ್ದೇವೆ. ಅದಕ್ಕೋಸ್ಕರವಾಗಿ ಕ್ರೀಡಾಂಗಣ ಕಾರ್ಯ ಅದಷ್ಟು ಬೇಗ ಮುಗಿಸುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ, ಅಂತರ ರಾಷ್ಟ್ರೀಯ ಯೂವ ಸಂವತ್ಸರದಲ್ಲಿ ಎಲ್ಲಾ ಕ್ರೀಡಾಂಗಣ ಕಾರ್ಯ ಮುಗಿಸುತ್ತೇವೆ.

SMT. MUKHTARUNNISA.—What is the fund you have collected from the public?

ಡಾ॥ ಜೀವರಾಜ ಆಳ್ವ.—ಈಗಾಗಲೇ ೨೫ ಲಕ್ಷ ಸಾರ್ವಜನಿಕ ವಂತಿಕೆ ಜಿಲ್ಲಾಧಿಕಾರಿಗಳ ಸಮಿತಿಯಿಂದ ಕೂಡಿದೆ.

ಕರ್ನಾಟಕ ಲೋಕಸೇವಾ ಆಯೋಗವು ವಿವಿಧ ಹುದ್ದೆಗಳಿಗೆ ಮಾಡಿರುವ ನೇಮಕಾತಿ ಬಗ್ಗೆ

೧೬೫. ಶ್ರೀ ಎಸ್. ಎಸ್. ಕಡಪಟ್ಟಿ (ಹುಸಗುಂದ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೫ ಏಪ್ರಿಲ್‌ನಿಂದ ಈವರೆಗೆ ಕರ್ನಾಟಕ ಲೋಕಸೇವಾ ಆಯೋಗವು 'ಎ' 'ಬಿ' ಮತ್ತು 'ಸಿ' ಗುಂಪಿನ ಹುದ್ದೆಗಳಿಗೆ ಮಾಡಿರುವ ನೇಮಕಾತಿಗಳೆಷ್ಟು (ವಿವರ ಮತ್ತು ಜಿಲ್ಲಾವಾರು ಮಾಹಿತಿ ಒದಗಿಸತಕ್ಕದ್ದು),

(ಆ) ವಿಲೀನೀಕರಣಗೊಂಡ ಪ್ರದೇಶಗಳ ಅಭ್ಯರ್ಥಿಗಳಿಗೆ ಸಾಕಷ್ಟು ಪ್ರಾತಿನಿಧ್ಯ ಕೊಟ್ಟಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ,

(ಇ) ಹಾಗಿದ್ದರೆ, ಈ ವ್ಯತಿಕ್ರಮ ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ, (ಮುಖ್ಯ ಮಂತ್ರಿಗಳು).—

(ಅ) ೧೯೮೫ ಏಪ್ರಿಲ್‌ನಿಂದ ಈವರೆಗೆ ಕರ್ನಾಟಕ ಲೋಕಸೇವಾ ಆಯೋಗವು 'ಎ', 'ಬಿ' ಮತ್ತು 'ಸಿ' ಗುಂಪಿನ ಹುದ್ದೆಗಳಿಗೆ ಮಾಡಿದ ನೇಮಕಾತಿಯ ವಿವರ ಮತ್ತು ಜಿಲ್ಲಾವಾರು ಮಾಹಿತಿಯನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸಲಾಗಿದೆ.

(ಆ) ಇಲ್ಲ.

(ಇ) ಪ್ರಶ್ನೆ (ಆ) ಭಾಗಕ್ಕೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆಗೆ ಉತ್ತರಿಸುವ ಅಗತ್ಯ ಉದ್ಭವಿಸುವುದಿಲ್ಲ.

STATEMENT

Recruitment made by the KPSC to Group A, Group-B and Group-C posts from April 1982 to todate and candidates selected from each District.

District	Recruitment of Gazetted Probationers through Competitive examination to Group-A and Group-B posts						Directrecruitment by selection to Grop-A and Group-B Posts						Direct recruitment by selection to Group-C Posts			Recruitment to Ministerial posts through Competitive Examination.		
	1982-83		1983-84		1984-85		1982-83		1983-84		1984-85		1982-83	1983-84	1984-85	1982-83	1983-84	1984-85
	A	B	A	B	A	B	A	B	A	B	A	B	C	C	C	C	C	C
Bangalore	9	24	14	27	14	29							77	42	33	264	400	207
Bidar	-	1	-	-	-	-							14	3	2	26	39	41
Bellary	-	-	-	2	1	3							8	2	5	78	70	68
Belgaum	1	1	3	4	2	5							7	4	5	65	26	36
Bijapur	1	6	1	1	1	3							23	1	7	117	100	84
Chitradurga	2	4	2	2	3	11							32	5	8	104	250	118
Chikmagalur	1	3	3	5	1	2							15	-	-	45	98	48
Kodagu	-	-	2	1	-	2							5	1	-	10	37	25

1	2	3	4	5	6	7	8	9	10	11	12	13	14
Dharwad	4	6	4	7	3	4	Districtwise	29	8	11	88	88	62
Gulbarga	1	–	2	1	–	3	figures not	5	2	2	68	75	138
Hassan	2	1	1	1	1	1	available	11	3	2	65	150	118
Kolar	5	7	7	6	8	6		12	–	4	76	103	61
Mysore	10	9	7	8	2	9		34	3	7	123	230	54
Mandya	1	3	2	1	–	2		17	5	6	[illegible]	190	68
U. Kannada	–	3	1	1	2	1		2	1	6	33	50	44
Raichur	–	1	1	1	–	2		9	2	2	58	100	37
Shimoga	1	3	3	8	2	9		19	2	3	103	190	92
D. Kannada	2	–	4	2	–	1		4	3	1	40	80	42
Tumkur	–	1	3	10	1	5		25	12	3	93	280	171
Total	40	73	60	88	41	98	29 36 592 715 632 759	348	99	108	1536	2466	1514

ಶ್ರೀ ಎಸ್. ಎಸ್. ಕಡಪಟ್ಟಿ.—ಇಂಟಿಗ್ರೇಟೆಡ್ ಏರಿಯಾಕ್ಕೆ ಸರಿಯಾದ ರೀತಿಯಲ್ಲಿ ನೇಮಕ ವಾಗಿಲ್ಲ ಎನ್ನುವುದು ತಾವು ಕಳುಹಿಸಿದ ಪಟ್ಟಿಯಿಂದ ಗೊತ್ತಾಗುತ್ತದೆ. ಬಿ ಗುಂಪಿನವರನ್ನು ೯೮ಕ್ಕೆ ೨೧ ಜನರನ್ನು ನೇಮಕ ಮಾಡಿದ್ದೀರಿ. ಸಿ ಗುಂಪಿನವರಲ್ಲಿ ೧೯೮೩-೮೪ರಲ್ಲಿ ೨,೪೬೬ ಸ್ಥಾನಗಳಲ್ಲಿ ಇಂಟಿಗ್ರೇಟೆಡ್ ಏರಿಯಾದಿಂದ ಳಿಲೆ ಮಾತ್ರ ಆಗಿದೆ. ಈ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ತಾವು ಡಿವಿಜನ್ ಕೋಟಾ ನಿಗದಿ ಮಾಡುತ್ತಿರೋ ಅಥವಾ ವಿಶ್ವವಿದ್ಯಾನಿಲಯಗಳಿಗೆ ಇತಿಷ್ಟು ಎಂದು ಆಯ್ಕೆಯಲ್ಲಿ ಸ್ಥಾನ ಮೀಸಲಿಡುತ್ತೀರೋ ? ಅಥವಾ ಯಾವ ರೀತಿ ನ್ಯಾಯ ದೊರೆಯುವಂತೆ ವ್ಯವಸ್ಥೆ ಮಾಡಲಾಗುವುದು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ೧೯೮೨-೮೩ನೇ ವರ್ಷದಿಂದ ಕೊಟ್ಟಿರತಕ್ಕ ಅಂಕಿಸಂಖ್ಯೆಯಲ್ಲಿ ಬೆಂಗಳೂರು ವಿಭಾಗಕ್ಕೆ ೩,೦೧೫ ಗುಲ್ಬರ್ಗಾ ವಿಭಾಗಕ್ಕೆ ೮೭೩, ಬೆಳಗಾಂ ವಿಭಾಗಕ್ಕೆ ೯೬೨, ಮೈಸೂರು ವಿಭಾಗಕ್ಕೆ ೧೬೨೦ ಈ ರೀತಿ ಹುದ್ದೆಗಳು ಪ್ರಾಪ್ತವಾಗಿವೆ. ಇದರಲ್ಲಿ ಡೈರಕ್ಟ್ ರೆಕ್ರೂಟ್‌ಮೆಂಟ್ ಬೈ ಸೆಲೆಕ್ಷನ್ ಟು ಗ್ರೂಪ್ ಎ ಮತ್ತು ಬಿ ಸೇರಿಲ್ಲ. ಜಿಲ್ಲಾವಾರು ಅಂಕಿ ನವ:ಗೆ ಸಿಗುತ್ತಿಲ್ಲ. ಮಾನ್ಯ ಕಡಪಟ್ಟಿಯವರು ಬೇರೆ ಬೇರೆ ವಿಭಾಗಗಳಿಗೆ ಸರಿಯಾದ ರೀತಿಯ ನ್ಯಾಯ ಸಿಗುವಂತೆ ಈಗಿರ ತಕ್ಕಂಥ ಪದ್ಧತಿಯಲ್ಲಿ ಏನಾದರೂ ಬದಲಾವಣೆ ಮಾಡುವುದು ಸಾಧ್ಯವೇ ಎಂದು ಕೇಳಿದ್ದಾರೆ. ಅದು ಕಾಯಿದೆ ಪ್ರಕಾರ ಸಾಧ್ಯವೇ ಎಂಬುದನ್ನು ನೋಡಬೇಕು. ಇದರಲ್ಲಿ ಒಂದು ವಿಚಾರವನ್ನು ಮಾನ್ಯ ಸದನಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ನಾವು ಇಡೀ ರಾಜ್ಯ ಒಂದು, ಎಂದು ತಿಳಿದುಕೊಂಡು, ಆ ಆಧಾರದ ಮೇಲೆ ರೆಕ್ರೂಟ್‌ಮೆಂಟ್ ಮಾಡುವಾಗ ಮತ್ತು ಈಗಾಗಲೇ ಅನೇಕ ತರಹದ ರಿಸರ್ವೇಷನ್ ಇಟ್ಟಿರುವಾಗ, ಪ್ರತಿಯೊಂದು ವಿಭಾಗಕ್ಕೆ ರಿಸರ್ವೇಷನ್ ಇರಬೇಕೆಂದು ಹೇಳುವುದು ಎಷ್ಟರಮಟ್ಟಿಗೆ ಸಾಧ್ಯ ಎನ್ನುವುದನ್ನು ನೋಡಬೇಕು, ಒಂದು ಮಾತು ನಿಜ, ಮೆಡಿಕಲ್ ಎಜುಕೇಷನ್ ತೆಗೆದುಕೊಂಡರೆ ಗುಲ್ಬರ್ಗಾ ಮತ್ತು ಬೆಳಗಾಂ ವಿಭಾಗಗಳ ಅಲ್ಲಿಯ ಅನುಸೂಚಿತ ಜಾತಿ ಮತ್ತು ವರ್ಗಗಳಿಗೆ ಸೇರಿದ ಮಕ್ಕಳಿಗೆ ಸ್ಥಾನವೇ ಸಿಗುತ್ತಿಲ್ಲ. ಹೋದವರ್ಷ ಯಾವುದೋ ಒಂದು ಪ್ರಸಂಗ ಬಂದು, ಅದನ್ನು ನಾನು ನೋಡಿದಾಗ ಗೊತ್ತಾಯಿತು. ೧೯೮೪-೮೫ನೇ ಸಾಲಿಗೆ ಬೆಳಗಾಂ ವಿಭಾಗದಲ್ಲಿ ಮೆಡಿಕಲ್ ಕಾಲೇಜಿಗೆ ಹರಿಜನ ಗಿರಿಜನರಿಗೆ ಸಿಗತಕ್ಕ ಸ್ಥಾನ ಕೇವಲ ಒಂದು ಅಥವಾ ಎರಡು ಇರಬಹುದು. ಪ್ರತಿಯೊಂದು ಜಿಲ್ಲೆಗೂ ಹರಿಜನರಿಗೆ ಪ್ರತ್ಯೇಕವಾದ ಸರ್ವೇಷನ್ ಮಾಡುವುದು ಎಷ್ಟರಮಟ್ಟಿಗೆ ಸಾಧ್ಯ ಎನ್ನುವುದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸದಸ್ಯರು ಹೇಳತಕ್ಕ ಮಾತಿನಲ್ಲಿ ಸತ್ಯವಿದೆ. ಒಂದು ಮಾತು. ಹಿಂದೆ ಈ ಮನೆಯ ಸದಸ್ಯರು ಒಂದು ಸಲಹೆ ಕೊಟ್ಟಿದ್ದರು. ಅದೇನೆಂದರೆ ಸರ್ಕಾರಿ ನೌಕರಿಯಲ್ಲಿ ರೆಕ್ರೂಟ್‌ಮೆಂಟ್ ಮಾಡುವಾಗ, ನಗರವಾಸಿಗಳಿಗೆ ಹೆಚ್ಚು ಸಂಖ್ಯೆಯಲ್ಲಿ ನೌಕರಿ ಸಿಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಿಗೆ ಸಿಗುತ್ತಾ ಇಲ್ಲ ಎಂದು. ಅದು ನಿಜ. ಆದುದರಿಂದ ಈ ಒಂದು ಅಧಿವೇಶನದ ಸಮಯದಲ್ಲಿಯೇ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ಈ ಬಗ್ಗೆ ವ್ಯಕ್ತ ಮಾಡಬೇಕು. ಎಲ್ಲಾ ಭಾಗದವರಿಗೂ. ಎಲ್ಲಾ ಪ್ರದೇಶದವರಿಗೂ ನ್ಯಾಯ ಸಿಗುವ ರೀತಿಯಲ್ಲಿ ಪೂಸ ಪದ್ಧತಿಯನ್ನು, ಕಾಯಿದೆ ಪ್ರಕಾರ ತರುವುದು ಸಾಧ್ಯವಿದ್ದರೆ, ನಮ್ಮ ಸರ್ಕಾರಕ್ಕೆ ಅದು ವಿರೋಧವಿಲ್ಲ. ಬೇಕಾದರೆ ಸದನದ ಒಂದು ಸಮಿತಿಯನ್ನು ಮಾಡಿದರೂ ನಾನು ಸ್ವಾಗತ ಮಾಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಮಾನ್ಯ ಅಧ್ಯಕ್ಷರೇ, ಪಿ ಅಂಡ್ ಟಿ ನಲ್ಲಿ ವಿಭಾಗ ಮಾದರಿಯಲ್ಲಿ ಹೆಚ್ಚಿಗೆ ಒಂದುಳಿದ ಪ್ರದೇಶಕ್ಕೆ ಜಾಸ್ತಿ ಆದ್ಯತೆ ಕೊಟ್ಟು ನೇಮಕ ಮಾಡುವುದು ಈಗಾಗಲೇ ಜಾರಿಯಲ್ಲಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅದನ್ನು ತರಿಸಿಕೊಂಡು ನೋಡಬಹುದು. ಅದು ಅಲ್ಲದೆ ಹಿಂದೆ ಸದನದಲ್ಲಿ ಅನೇಕ ಸದಸ್ಯರು ವ್ಯಕ್ತ ಮಾಡಿದ ರೀತಿಯಲ್ಲಿ, ಯಾವ ರೀತಿಯ ವ್ಯವಸ್ಥೆ ಮಾಡಬೇಕು ಎಂಬುದನ್ನು ವಿಚಾರ ಮಾಡಬೇಕು. ಸದನದ ಸಮಿತಿಯನ್ನು ಯಾವಾಗ ನೇಮಿಸುತ್ತೀರಿ ? ಮತ್ತು ಎಷ್ಟು ತಿಂಗಳಲ್ಲಿ ಅದು ಆಗಬೇಕಾಗುತ್ತದೆ ಎನ್ನುವುದನ್ನು ತಿಳಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಅಧಿವೇಶನ ಮುಗಿಯಲಿ, ಆಮೇಲೆ ಯೋಚನೆ ಮಾಡೋಣ. ಈ ವಿಚಾರವಾಗಿ ಸದಸ್ಯರು ಅಧಿವೇಶನದಲ್ಲಿ ಸಲಹೆ ಕೊಡಬೇಕು.